ಇಂದು ದಿನಾಂಕ 16.02.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಪಾಟಿ ಸವಾಲುಃ ಜೆಡಿಆರ್ ಪರ ಶ್ರೀ ಯುಡಿಡಿ ವಕೀಲರಿಂದ

1. ನಾನು ಕೋಡಮಗ್ಗಿ ಗ್ರಾಮಕ್ಕೆ ಸೇರಿದವನು. ಡಿಹೆಚ್ಆರ್ ಮತ್ತು ಜೆಡಿಆರ್‌ರವರ ಪರಿಚಯ ನನಗೆ ಇದೆ. ಡಿಹೆಚ್ಆರ್ ಮತ್ತು ಜೆಡಿಆರ್‌ರವರ ಆಸ್ತಿ ನಂಬರ್ ನನಗೆ ಗೊತ್ತಿಲ್ಲ. ಬಸವಣ್ಣೆಪ್ಪರವರು ಯಡಗೋಡಿರವರ ವಿರುದ್ದ ಏತಕ್ಕಾಗಿ ದಾವೆ ಮಾಡಿದ್ದರ ಕುರಿತು ನನಗೆ ಮಾಹಿತಿ ಇಲ್ಲ. ಈ ಹಿಂದೆ ನ್ಯಾಯಾಲಯದಲ್ಲಿ ಬಸವಣ್ಣೆಪ್ಪರವರ ಪರವಾಗಿ ಎನು ಆದೇಶ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಬಸವಣ್ಣೆಪ್ಪ ಮತ್ತು ಯಡಗೋಡಿಯವರ ಜಮೀನಿನ ನಡುವೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸಾಕ್ಷಿಯು ಕಾಲುದಾರಿ ಇದೆ ಎಂದು ನುಡಿಯುತ್ತಾರೆ. ಸದರಿ ಕಾಲುದಾರಿಯ ಕೆಳಗಡೆ ಕಾಲುವೆ ಹೋಗುತ್ತದೆ ಎಂದು ಸೂಚಿಸುವುದು ಸರಿ. ಸದರಿ ಕಾಲುದಾರಿಯಲ್ಲಿ ಯಾವುದೇ ತಂತಿಬೇಲಿ ಇರುವುದಿಲ್ಲ, ಆದರೆ ಬಸವಣ್ಣೆಪ್ಪರವರ ತೋಟದಲ್ಲಿ ಇರುತ್ತದೆ.

2. ಸದರಿ ತಂತಿಬೇಲಿಯನ್ನು ಬಸವಣ್ಣೆಪ್ಪರವರು ತಮ್ಮ ಹದ್ದುಬಸ್ತಿಗೋಸ್ಕರ ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ಬಸವಣ್ಣೆಪ್ಪರವರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆ ಕಾರಣದಿಂದ ಬಸವಣ್ಣೆಪ್ಪರವರು ಹದ್ದುಬಸ್ತಿಗೋಸ್ಕರ ತಂತಿಬೇಲಿ ಹಾಕಿಕೊಂಡಿದ್ದರೂ ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಮತ್ತು ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಮತ್ತು ಬಸವಣ್ಣೆಪ್ಪರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.